೧೧.೩೦ ಎ ಎಂ.

೫. ಕನ್ನಡ ಕಾವಲು ಸಮಿತಿ ರಚಿಸುವುದು

ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) —ಮಾನ್ಯ ಉಪಾಧ್ಯಕ್ಷರೇ, ಕನ್ನಡದ ಅಭಿವೃದ್ಧಿ, ಕನ್ನಡ ಭಾಷೆಯ ಅಭಿವೃದ್ಧಿ, ಕನ್ನಡ ಬಳಕೆಯಲ್ಲಿ ಸಾರ್ವತ್ರಿಕ ಕಡ್ಡಾಯ ಈ ಕುರಿತು ನೋಡಿಕೊಳ್ಳಲು ಈ ಹಿಂದೆ ಕನ್ನಡ ಕಾವಲು ಸಮಿತಿ ಕಾರ್ಯ ನಿರ್ವಹಿಸುತ್ತಿತ್ತು. ಈಗ ಅದು ನಿಂತುಹೋಗಿದೆ. ಹೀಗಿರುವಾಗ ಕರ್ನಾಟಕದ ಹಿತ ರಕ್ಷಣೆಗೆ, ಕನ್ನಡದ ಹಿತರಕ್ಷಣೆಗೆ ಇದು ಭಾರೀ ಸಹಾಯಕವಾಗುತ್ತಿತ್ತು. ಆದಕಾರಣ ಮುಂದೆ ಕನ್ನಡ ಕಾವಲು ಸಮಿತಿಯನ್ನು ರಚಿಸಲಾಗುವುದೇ? ಅಥವಾ ಕನ್ನಡ ಅನುಷ್ಠಾನ ಸಮಿತಿಯನ್ನು ರಚಿಸಲಾಗುವುದೇ? ಕನ್ನಡದ ಅಭಿವೃದ್ಧಿಗೆ ಆಡಳಿತ ಭಾಷೆಯಾಗಿ ಕನ್ನಡ ಮೇರೆದಾಡಲು ಇದು ಸಹಾಯಕವಲ್ಲವೇ? ಈ ಕುರಿತು ಮಾನ್ಯ ಮಂತ್ರಿ ಸಚಿವರ ಹಾಗೂ ಶಿಕ್ಷಣ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಕೆ.ಎಚ್. ರಂಗನಾಥ್ (ಶಿಕ್ಷಣ ಸಚಿವರು).—ಮಾನ್ಯ ಉಪಾಧ್ಯಕ್ಷರಿಯವರೇ, ತಮ್ಮ ಅಪ್ಪಣೆ ಪಡೆದು ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ ಈ ಹೇಳಿಕೆ ಕೊಡಬಯಸುತ್ತೇನೆ.

ದಿನಾಂಕ ೧೫–೨–೧೯೮೯ ರಂದು ಕನ್ನಡ ಕಾವಲು ಮತ್ತು ಗಡಿ ಸಲಹಾ ಸಮಿತಿಯ ಅಧ್ಯಕ್ಷರ ರಾಜೀನಾಮೆಯಿಂದಾಗಿ ಸದ್ಯಕ್ಕೆ ಸಮಿತಿ ಕಾರ್ಯನಿರ್ವಹಿಸುತ್ತಿಲ್ಲ. ಸದ್ಯಕ್ಕೆ ಸಮಿತಿಯನ್ನು ಪುನರ್ ರಚಿಸಿಲ್ಲ. ಆದರೆ ಸರ್ಕಾರ ಹಮ್ಮಿಕೊಂಡಿರುವ ಕನ್ನಡ ಅನುಷ್ಠಾನ ಸಂಬಂಧ ಕಾರ್ಯಗಳು ಎಂದಿನಂತೆ ಮುಂದುವರಿದಿವೆ. ಬಾವುಟ 'ಅ'

ಕನ್ನಡ ಕಾವಲು ಸಮಿತಿ ರಚನೆ (ಹಿಂದೆ ರಚಿಸಲಾದವುಗಳು)

೧) ದಿನಾಂಕ ೨೩–೬–೧೯೮೩ ರಂದು ಶ್ರೀ ಸಿದ್ಧರಾಮಯ್ಯನವರ ಅಧ್ಯಕ್ಷತೆಯಲ್ಲಿ ಮೊದಲಿಗೆ ಸಮಿತಿ ರಚಿಸಲಾಯಿತು. ಸದಸ್ಯರ ಸಂಖ್ಯೆ–೧೮.

೨) ದಿನಾಂಕ ೫–೯–೧೯೮೪ ರಂದು ಶ್ರೀ ದೊಡ್ಡಮೇಟಿ ಜ್ಞಾನದೇವ ಶಿವನಾಗಪ್ಪನವರ ಅಧ್ಯಕ್ಷತೆಯಲ್ಲಿ ಸದಸ್ಯರು–೧೮.

೩) ದಿನಾಂಕ ೨೬–೮–೧೯೮೫ ರಂದು ಶ್ರೀ ಪಾಟೀಲ ಪುಟ್ಟಪ್ಪ ಅವರ ಅಧ್ಯಕ್ಷತೆಯಲ್ಲಿ ಸದಸ್ಯರು –೧೫ (ಗಡಿ ಸಲಹಾ ಸಮಿತಿಯನ್ನು ವಿಲೀನಗೊಳಿಸಿ)

೪) ದಿನಾಂಕ ೧೫–೧೨–೧೯೮೭ರಂದು ಶ್ರೀ ಪಾಟೀಲ ಪುಟ್ಟಪ್ಪನವರ ಅಧ್ಯಕ್ಷತೆಯಲ್ಲಿ– ಸದಸ್ಯರು–೮. ಆದಾದ ಮೇಲೆ ಈಗ ಸಮಿತಿ ಇಲ್ಲ.

2) ಸಮಿತಿ ರಚನೆ ಉದ್ದೇಶ

೧೯೮೩ ರಿಂದ ಸರ್ಕಾರ ಕನ್ನಡ ಅನುಷ್ಠಾನ ಸಂಬಂಧ ಹಲವಾರು ಆದೇಶಗಳನ್ನು ಹೊರಡಿಸಿದೆ. ಅವುಗಳನ್ನು ಎಲ್ಲ ಕಛೇರಿಗಳು ಜಾರಿಗೆ ತಂದಿವೆಯೇ ಎಂಬುದನ್ನು ಅಧ್ಯಯನ ಮಾಡಿ ಲೋಪದೋಷ ಗಳಿದ್ದರೆ ಅವುಗಳಿಗೆ ಯಾರು ಅಥವಾ ಏನು ಕಾರಣ ಎಂಬುದನ್ನು ಗುರುತಿಸಿ ಸರ್ಕಾರಕ್ಕೆ ಸಲಹೆ ನೀಡುವುದು.

3) ಸಮಿತಿಗೆ ನೀಡಿದ್ದ ಕಾರ್ಯವ್ಯಾಪ್ತಿ

ಅ) ಸರ್ಕಾರದ ಭಾಷಾ ನೀತಿಯನ್ನು ಜಾರಿಗೆ ತರಲು ಎಲ್ಲ ಇಲಾಖೆಗಳು ಕಟ್ಟು ನಿಟ್ಟಾಗಿ ಪ್ರಯತ್ನಿಸಿರುವವೇ ?

ಆ) ಈ ಪ್ರಯತ್ನಗಳಲ್ಲಿ ಏನಾದರೂ ನ್ಯೂನತೆಗಳು ಕಂಡು ಬಂದಿರುವವೇ ? ಹಾಗಿದ್ದರೆ ಅವುಗಳು ಯಾವುವು ?

ಇ) ಈ ನ್ಯೂನತೆಗಳಿಗೆ ಯಾರು ಅಥವಾ ಏನು ಕಾರಣವಾಗಿರುವುದು ?

ಈ) ಈ ನ್ಯೂನತೆಗಳನ್ನು ಹೋಗಲಾಡಿಸಲು ಸಲಹೆಗಳೇನು ?

ಉ) ಸರ್ಕಾರದ ಭಾಷಾ ನೀತಿಯನ್ನು ಅತ್ಯಂತ ತ್ವರಿತವಾಗಿ ಮತ್ತು ತೃಪ್ತಿಕರವಾಗಿ ಕಾರ್ಯ ರೂಪಕ್ಕೆ ತರಲು ಏನಾದರೂ ಸಲಹೆಗಳಿವೆಯೇ ಮತ್ತು

ಊ) ಮಹಾಜನ ಆಯೋಗದ ಚೌಕಟ್ಟಿನಲ್ಲಿ ಗಡಿ ವಿಷಯವಾಗಿ ರಾಜ್ಯ ಸರ್ಕಾರಕ್ಕೆ ಸಲಹೆ ನೀಡುವುದು. (ಡಿ ಪಿ ಎ ಆರ್ ೩೪೪ ಕೆ ಒ ಎಲ್ ೮೭, ೧೫–೧೨–೮೭)

ಕನ್ನಡ ಅನುಷ್ಠಾನ ಕಾರ್ಯಕ್ರಮಗಳು

೧) ಆಂಗ್ಲ ಬೆರಳಚ್ಚು ಯಂತ್ರಗಳ ಬದಲಿಗೆ ಕನ್ನಡ ಬೆರಳಚ್ಚು ಯಂತ್ರಗಳ ಸರಬರಾಜು.

೨) ಪೂರಕ ಸಾಹಿತ್ಯದ ಸೃಷ್ಟಿ, ಪರಿಷ್ಕಾರ, ಸರಳೀಕರಣ

೩) ನಮೂನೆಗಳು, ರಿಜಿಸ್ಟರ್‌ಗಳನ್ನು ಕನ್ನಡದಲ್ಲೇ ಮುದ್ರಿಸಿ ಸರಬರಾಜು ಮಾಡಬೇಕೆಂಬ ಸೂಚನೆ

೪) ರಾಜ್ಯದಾದ್ಯಂತ ಎಲ್ಲ ಮಟ್ಟದ ಕಚೇರಿಗಳಿಗೆ ಭೇಟಿ ನೀಡಿ ಕನ್ನಡ ಬಳಕೆ ತನಿಖೆ.

೫) ಪ್ರತಿ ತಿಂಗಳು ಸಮೀಕ್ಷಾ ವರದಿ ಪಡೆದು ಅವುಗಳ ಪರಿಶೀಲನೆ.

೬) ಆಡಳಿತ ಕನ್ನಡ ಬಳಕೆಯಲ್ಲಿ ಪ್ರೇರಕ ಹಾಗೂ ಪೋಷಕವಾದಂತಹ ತರಬೇತಿ ಕಾರ್ಯಕ್ರಮಗಳು.

೭) ಆಡಳಿತದಲ್ಲಿ ಕನ್ನಡ ಬಳಕೆ ಅಗತ್ಯತೆ ಕುರಿತು ಜನಸಾಮಾನ್ಯರಲ್ಲಿ ಹಾಗೂ ನೌಕರರಲ್ಲಿ ಪ್ರಜ್ಞೆ ಮೂಡಿಸುವಂತಹ ವಸ್ತು ಪ್ರದರ್ಶನಗಳು, ಸಾಹಿತ್ಯ ನಿರ್ಮಾಣ.

೮) ಇಲಾಖಾ ಕೈಪಿಡಿಗಳು, ಸೇವಾ ನಿಯಮಗಳಿಗೆ ಸಂಬಂಧಿಸಿದ ಪೊತ್ತಿಗೆಗಳು, ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅಧಿನಿಯಮಗಳನ್ನು ಕನ್ನಡಕ್ಕೆ ಭಾಷಾಂತರಿಸಲು ತುರ್ತು ಕ್ರಮ.

೯) ಬೇರೆ ಬೇರೆ ರಾಜ್ಯಗಳಲ್ಲಿ ಭಾಷಾ ಅನುಷ್ಠಾನ ಕಾರ್ಯಕ್ರಮಗಳ ಪರಿಶೀಲನೆ ಅಧ್ಯಯನ.

೧೦) ವಿವಿಧ ಮಟ್ಟದ ಅಧಿಕಾರಿಗಳ ಸಭೆ ನಡೆಸಿ ಕನ್ನಡ ಬಳಕೆ ಪ್ರಗತಿ ಪರಿಶೀಲನೆ ಮತ್ತು ಕನ್ನಡ ಅನುಷ್ಠಾನ ಸಂಬಂಧ ಬರಬಹುದಾದ ತೊಂದರೆಗಳನ್ನು ಗುರುತಿಸಿ ನಿವಾರಣೆಗೆ ಪರಿಹಾರ ಸೂಚನೆ.

೧೧) ಕನ್ನಡದಲ್ಲಿ ರಾಜ್ಯ ಪತ್ರ ಪ್ರಕಟಣೆ

೧೨) ಸೇವಾ ನಿಯಮಗಳಲ್ಲಿ ಕನ್ನಡಕ್ಕೆ ಆದ್ಯತೆ.

1) ಬೆರಳಚ್ಚು ಯಂತ್ರಗಳು

೬೫೨೯ ಕನ್ನಡ ಬೆರಳಚ್ಚು ಯಂತ್ರಗಳನ್ನು ಸರಬರಾಜು ಮಾಡಿದೆ.

೪೬೭೭ ಆಂಗ್ಲ ಬೆರಳಚ್ಚು ಯಂತ್ರಗಳನ್ನು ಹಿಂತೆಗೆದುಕೊಂಡಿದೆ. (೨೮-೨-೧೯೯೦ ರಲ್ಲಿದ್ದಂತೆ)

2) ತನಿಖೆ

೧೯೮೭ ರಿಂದ ಇದುವರೆವಿಗೂ ಒಟ್ಟು ೩೭೦ ಕಛೇರಿಗಳಿಗೆ ಭೇಟಿ ನೀಡಿ ತನಿಖೆ ಮಾಡಿ ಅನುಸರಣಾ ವರದಿಗಳನ್ನು ಪಡೆದಿದೆ.

೧೯೯೦ ನೇ ವರ್ಷಕ್ಕೆ ತನಿಖೆಗಾಗಿ ೧೧೦ ಕಛೇರಿಗಳನ್ನು ಆಯ್ಕೆ ಮಾಡಿದೆ.

3) ಪೂರಕ ಸಾಹಿತ್ಯ

ಸರಬರಾಜು ಪ್ರಕಟಣೆ, ಪರಿಷ್ಕಾರ ಕಾರ್ಯಗಳು ಮುಂದುವರಿದಿವೆ. ೨೯ ಇಲಾಖಾ ಪಾರಿಭಾಷಿಕ ಶಬ್ದಕೋಶಗಳನ್ನು ಪ್ರಕಟಿಸಿದೆ.

4) ಸಮೀಕ್ಷೆ :

ರಾಜ್ಯದ ಪ್ರತಿ ಕಛೇರಿಯಿಂದ ವರ್ಷಕ್ಕೆ ಸರಾಸರಿ ೧೫೦೦೦ ಕನ್ನಡ ಬಳಕೆ ವರದಿ ಪಡೆದು ಅವುಗಳನ್ನು ಸಮೀಕ್ಷಿಸಲಾಗುತ್ತಿದೆ.

5) ಕನ್ನಡ ಬಳಕೆ ಶೇಕಡ ಪ್ರಮಾಣ

೧) ತಾಲ್ಲೂಕು ಉಪವಿಭಾಗ ಮಟ್ಟದಲ್ಲಿ ಶೇಕಡ ೧೦೦ ಕ್ಕೆ ೧೦೦.

೨) ಜಿಲ್ಲಾ ಮಟ್ಟದಲ್ಲಿ ಶೇಕಡ ೮೦ ರಷ್ಟು

೩) ಸಚಿವಾಲಯ ಮಟ್ಟದಲ್ಲಿ ಶೇಕಡ ೬೫–೭೦ ರಷ್ಟು.